ಡು ಪೋಸ್ಟ್ ಮಾರ್ಟ್‌ಂ ಇನ್ ಡಿಟೇಲ್. ಸಣ್ಣ ಲ್ಯಾಪ್ಸ್‌ಗೂ ಅವಕಾಶ ಇರ್‌ಬಾರ್ದು. ಫಸ್ಟ್ ಕೇಸ್ ಆಗಿರೋದ್ರಿಂದ ಮೆಡಿಕಲ್ ರಿಸರ್ಚ್ ಟೈಮ್‌ನಲ್ಲಿ ಮತ್ತೆ ಮತ್ತೆ ರೆಫರೆನ್ಸ್‌ಗೆ ಬೇಕಾಗುತ್ತೆ.'

'ಓಕೆ ಸರ್.'

'ಅಂದಹಾಗೆ, ಆ ವ್ಯಕ್ತಿ ಎಲ್ಲಿಂದ ವಾಪಸ್ ಆಗಿದ್ದರು ಅಂದಿರಿ?'

'ಗಲ್ಫ್‌ನಿಂದ ಸರ್.'

'ಎಲ್ಲಾ ಕನ್ಸರ್ನ್ ಡಿಪಾರ್ಟ್‌ಮೆಂಟ್‌ಗಳಿಗೂ ರಿಪೋರ್ಟ್ ಮಾಡಿ. ನಾನು ಆಮೇಲೆ ಸಿಗ್ತೀನಿ' ಎಂದು ರಿಸೀವರ್ ಇಟ್ಟ ಡಾ. ರಿಯೂ ಪುನಃ ಸಭೆಯತ್ತ ನಡೆದರು. ಮುಂದೆ ನಡೆಯಬಹುದಾದ ಘಟನೆಗಳ ಲೆಕ್ಕಹಾಕುತ್ತಾ ಅವರು ಚಿಂತಾಕ್ರಾಂತರಾದರು.

***

ನಿಡುಗಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿಯನ್ನು ಆರೋಗ್ಯಧಾಮವೊಂದಕ್ಕೆ ಸೇರಿಸಲು ರೈಲು ಹತ್ತಿಸಿ ಬಂದ ಡಾ. ರಿಯೂ ಅವರಿಗೆ ಆಸ್ಪತ್ರೆಯಲ್ಲಿ ಪುರುಸೊತ್ತು ಎನ್ನುವುದೇ ಇರಲಿಲ್ಲ. ಒಂದರ ಬೆನ್ನಹಿಂದೆ ಒಂದು ಪ್ರಕರಣ ದಾಖಲಾಗತೊಡಗಿದವು. ಕೋವಿಡ್ ವಾರ್ಡ್ ಎರಡೇ ದಿನಗಳಲ್ಲಿ ಭರ್ತಿ ಆಯಿತು. ನಗರದ ಉಳಿದ ಸರ್ಕಾರಿ ಆಸ್ಪತ್ರೆಗಳಲ್ಲೂ ಇಂತಹ ವಾರ್ಡ್‌ಗಳನ್ನು ತೆರೆಯಬೇಕು ಎಂದು ಡಾ. ರಿಯೂ ಮೊದಲೇ ಸಲಹೆ ಕೊಟ್ಟಿದ್ದರೂ ಸರ್ಕಾರ ಕಿವಿಗೆ ಹಾಕಿಕೊಂಡಿರಲಿಲ್ಲ. ಆಸ್ಪತ್ರೆಯಿಂದ ಆಸ್ಪತ್ರೆಗೆ ರೋಗಿಗಳ ಅಲೆದಾಟ ಶುರುವಾಯಿತು. ಆಂಬುಲೆನ್ಸ್‌ಗಳು ಬೇಗಬರದೆ ಮನೆ ಬಾಗಿಲಲ್ಲೇ ಎಷ್ಟೋ ರೋಗಿಗಳು ಕುಸಿದು ಪ್ರಾಣಬಿಟ್ಟರು. ಚಿತಾಗಾರಗಳಿಗೆ ಮೃತದೇಹಗಳನ್ನು ಸಾಗಿಸಲೂ ವಾಹನಗಳು ಬರಲಿಲ್ಲ. 'ಜಡತ್ವ ಬಿಟ್ಟು ಎದ್ದೇಳಿ, ಕ್ರಮ ಕೈಗೊಳ್ಳಿ' ಎಂದು ಜನ ಕಾರ್ಪೊರೇಷನ್ ವಿರುದ್ಧ ಪ್ರತಿಭಟನೆಗೆ ಇಳಿದರು. ಕೋವಿಡ್ ಎಂದೊಡನೆ ಕೊನೆಗಾಲವೇ ಸಮೀಪಿಸಿದಂತೆ ಅವರು ವಿಹ್ವಲಗೊಂಡರು.

ಡಾ. ರಿಯೂ ಆಗಬೇಕಿರುವ ವ್ಯವಸ್ಥೆಗಳ ಕುರಿತು ಸರ್ಕಾರಕ್ಕೆ ಎಚ್ಚರಿಸುತ್ತಲೇ ಇದ್ದರು. ಒಮ್ಮೆ ಸಚಿವರಿಗೆ ಕರೆ ಮಾಡಿದ ಅವರು, 'ಸರ್, ಪಿಪಿಇ ಕಿಟ್‌ಗಳು ಇನ್ನೂ ಬರಲಿಲ್ಲ. ಸಿಬ್ಬಂದಿ ವಾರ್ಡ್ ಒಳಗಡೆಗೆ ಹೋಗೋಕೇನೇ ಹೆದರ್ತಾರೆ. ಟೆಸ್ಟ್ ಇಕ್ವಿಪ್‌ಮೆಂಟ್‌ಗಳೂ ಸಿಕ್ಕಿಲ್ಲ. ಹೀಗಾದ್ರೆ ಪೇಷಂಟ್‌ಗಳಿಗೆ ಟ್ರೀಟ್‌ಮೆಂಟ್ ಕೊಡಿಸೋದು ಕಷ್ಟ. ಪ್ರಕರಣಗಳ ಸಂಖ್ಯೆ ಬೇರೆ ಒಂದೇಸಮನೆ ಹೆಚ್ತಿದೆ' ಎಂದು ಹೇಳಿದರು. 'ಅಯ್ಯೋ, ಟೆಂಡರ್ ಕರೆದು ಆರ್ಡರ್ ಕೊಟ್ಟಿದ್ದೇವೆ. ಪಿಪಿಇ ಕಿಟ್‌ಗಳು ಚೀನಾದಿಂದ ಬರ್ಬೇಕು. ಸ್ವಲ್ಪ ತಡ್ಕಳ್ಳಿ ಡಾಕ್ಟ್ರೆ' ಎಂದು ಸಚಿವರು ಉತ್ತರಿಸಿದರು. ಹೆಚ್ಚು–ಕಡಿಮೆ ಹದಿನೈದು ದಿನಗಳಿಂದ ಡಾ. ರಿಯೂ ಅವರಿಗೆ ಇಂಥದ್ದೇ ಏನೋ ಒಂದು ಉತ್ತರ ಸಿಗುತ್ತಿತ್ತು.

ದೇಶದ ತುಂಬಾ ಪ್ರಕರಣಗಳು ಹೆಚ್ಚಾಗಿದ್ದರಿಂದ ಜನ ಮನೆಯಿಂದ ಆಚೆ ಬರದಂತೆ ನಿರ್ಬಂಧ ವಿಧಿಸಿ ಸರ್ಕಾರ ಲಾಕ್‌ಡೌನ್ ಘೋಷಿಸಿತು. ಊರಿಗೆ ಊರೇ ಲಾಕ್‌ಡೌನ್ ಆಗುವುದನ್ನು ಇತರ ನಗರಗಳಂತೆ ಬೆಂಗಳೂರು ಕೂಡ ಬೆರಗುಗಣ್ಣಿನಿಂದ ನೋಡಿತು. ಲಾಕ್‌ಡೌನ್, ಸೀಲ್‌ಡೌನ್, ಕಂಟೈನ್‌ಮೆಂಟ್, ಸೋಶಿಯಲ್ ಡಿಸ್ಟನ್ಸ್, ಕ್ವಾರಂಟೈನ್‌ನಂತಹ ಹೊಸ ಹೊಸ ಪದಗಳು ಜನರಿಗೆ ಪರಿಚಯವಾದವು. ಉದ್ಯೋಗಿಗಳಿಗೆ ವರ್ಕ್ ಫ್ರಂ ಹೋಂ ಎನ್ನುವುದು ಮಂತ್ರವಾಯಿತು. ಮುಖಗಳನ್ನು ಮುಚ್ಚಲು ಮಾಸ್ಕ್‌ಗಳು ಬಂದವು. ಗಂಟಲಲ್ಲಿ ಅನ್ನದ ಅಗುಳು ಸಿಕ್ಕು ಕೆಮ್ಮಿದರೂ ಸಾಕು, ಜನ ಬೆಚ್ಚಿಬೀಳಲು ಶುರು ಮಾಡಿದರು. ಆಸ್ಪತ್ರೆಗಳಲ್ಲಿ ಏದುಸಿರು ಬಿಡುತ್ತಿದ್ದವರ ಆರ್ತನಾದ. ಕೆಮ್ಮಿದರೆ ಗೊರಗೊರ ಎನ್ನುವ ಸದ್ದು. ಜ್ವರದಿಂದ ನರಳುವುದು, ಏದುಸಿರು ಬಿಡುವುದು, ಅದೃಷ್ಟವನ್ನು ಹಳಿಯುವುದು – ರೋಗಿಗಳಿಗೆ ಇದೇ ಕೆಲಸವಾಯಿತು. ಹೌದು, ಎಲ್ಲ ಸೆರೆಯಾಳುಗಳಿಗೂ ಗಡೀಪಾರಾದ ಎಲ್ಲ ದುರ್ದೈವಿಗಳಿಗೂ ಮೀಸಲಾದಂತಹ ಗಾಢ ವಿಷಾದವು ನಮ್ಮ ಊರಿನ ಜನರನ್ನು ಆವರಿಸಿಬಿಟ್ಟಿತು. ಅದು ಪ್ರಯೋಜನವಿಲ್ಲದ ನೆನಪುಗಳೊಂದಿಗೆ ದಿನ ಕಳೆಯುವ ಅಸಹನೀಯ ಅಳಲು. ಆಸ್ಪತ್ರೆ ಸೆರೆಯಾಳುಗಳಲ್ಲಿ ಸಾವಿರಾರು ಮಂದಿ ಸತ್ತರು. ಉಳಿದವರು ಹೈರಾಣಾಗಿ 'ನೆಗೆಟಿವ್' ವರದಿ ಹಿಡಿದು ಹೊರಬಂದರು.

ಮುಗಿಲಿನಲ್ಲಿ ಹಾರಿಹೋಗುವ ಹಕ್ಕಿಗಳ ಹಿಂಡು, ಮುಳುಗುವ ಸೂರ್ಯನ ಸಂಗಡ ಕೆಳಗಿಳಿಯುವ ತಂಪುಗಾಳಿ, ಖಾಲಿ ಹಾದಿಗಳ ಮೇಲೆ ಕಾಣಿಸುವ ಸೂರ್ಯನ ಕಿರಣಗಳ ಲೀಲೆ ಇವೆಲ್ಲವೂ ಮನೆಯೊಳಗೆ ಬಂದಿಯಾದ ಊರಿನ ಜನರ ನೋವಿನ ತೀವ್ರತೆಯನ್ನು ಜಾಸ್ತಿ ಮಾಡುತ್ತಿದ್ದವು. ಆದರೆ, ಸುರಂಗದ ಕೊನೆಗೆ ಬೆಳ್ಳಿ ಬೆಳಕು ಕಾಣಲೇಬೇಕಲ್ಲ? ಬರುಬರುತ್ತಾ ಕಡಲಿನ ಅಲೆಗಳ ಅಬ್ಬರ ಕಡಿಮೆ ಆಗುವಂತೆ



ಕೊಯಮತ್ತೂರಿನಲ್ಲಿ ಅವತಾರವೆತ್ತಿದ ಕೊರೊನಾ ದೇವಿ



ಕಮೂ ಕಂಡಂತೆ ಕೋವಿಡ್ ಕಾಲಕನ್ನಡಿ